ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 17 ಮತ್ತು 24 ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಚೇರ್ಮನ್ : ಪ್ರಸ್ತಾವ ಏನೆಂದರೆ

"ತಿದ್ದುಪಡಿಯಾದ ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಅನುಮೋದನಾ ಪ್ರಸ್ತಾವ

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ಸಚಿವರು): ಮಾನ್ಯ ಅಧ್ಯಕ್ಷರೇ,

"1996 ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸದನವು ಅನುಮೋದಿಸಬೇಕೆಂದು ಕೋರುತ್ತೇನೆ"

ಚೇರ್ಮನ್ : ಪ್ರಸ್ತಾವ ಏನೆಂದರೆ

"1996 ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸದನವು ಅನುಮೋದಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕಕ್ಕೆ ತಿದ್ದುಪಡಿಯಾದ ರೀತಿಯಲ್ಲಿ ಒಪ್ಪಿಗೆ ನೀಡಲಾಯಿತು

8. ವಿತ್ತೀಯ ಕಾರ್ಯಕಲಾಪ

2003-04ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ (ಮುಂದುವರಿದುದು)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲಿನ ಚರ್ಚೆಯನ್ನು ನಿನ್ನೆ ಆರಂಭ ಮಾಡಿ, ನಾನು ಪ್ರಾಥಮಿಕ ಶಿಕ್ಷಣದಲ್ಲಿ ಮಧ್ಯಾಹ್ನದ ಊಟದ ಬಗ್ಗೆ, ಪ್ರಸ್ತಾಪ ಮಾಡಿದ್ದೆ. ಬಿಸಿಯೂಟಕ್ಕೆ ಈಗಾಗಲೇ ಕೇಂದ್ರ ಸರಕಾರ ಅಕ್ಕಿ ಮತ್ತು ಗೋಧಿ ಮುಂತಾಗಿ ಮುಖ್ಯವಾದ ಧಾನ್ಯಗಳನ್ನು ಒದಗಿಸುವುದಕ್ಕೆ, ಬದ್ಧ ಇದೆ. ಈಗಾಗಲೇ ಅದನ್ನು ಕೊಡುತ್ತಾ ಇದ್ದಾರೆ. ನಮ್ಮ ರಾಜ್ಯ ಸರಕಾರದವರು ಮಿಸಲೇನಿಯಸ್ ಆಗಿ ಒಬ್ಬ ವಿದ್ಯಾರ್ಥಿಗೆ ಒಂದು ರೂಪಾಯಿ ಲೆಕ್ಕದಲ್ಲಿ ಕೊಡುವಂಥಾದ್ದು ಅವರ ಇನ್‌ವಾಲ್ವ್‌ಮೆಂಟ್ ಆಗಿದೆ. ಅದಕ್ಕೆ ದುಡ್ಡು ಕೊರತೆಯಾಗಿ ಆನ್‌ಲೈನ್ ಲಾಟರಿಯಲ್ಲಿ ಬಂದಂಥದ್ದನ್ನು ನಾವು ಬಿಸಿಯೂಟಕ್ಕೆ ಉಪಯೋಗಿಸುತ್ತೇವೆ ಎಂದು ಹೇಳತಕ್ಕಂಥಾದ್ದು ಆ ಮಕ್ಕಳಿಗೆ ಮಾಡಿರತಕ್ಕಂಥ ಅಪಮಾನ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಆಯವ್ಯಯದಂಥ ಒಂದು ಸದುದ್ದೇಶದಿಂದ ಮಂಡಿಸಿರತಕ್ಕಂಥ ಈ ಒಂದು ಪ್ರಸ್ತಾವನೆಯಲ್ಲಿ....

ನಮ್ಮ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಇಂತಹ ಒಂದು ಅವಮಾನಕಾರಿಯಾಗಿರುವಂತಹ ಸಂಗತಿಯನ್ನು ಮಂಡಿಸಬಾರದಾಗಿತ್ತು ಎನ್ನುವಂಥದ್ದು ನನ್ನ ಇರಾದೆ ಇದೆ. ಈಗಾಗಲೇ ನಮ್ಮ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಒಂದು ಪ್ರಸ್ತಾಪ ಏನೆಂದರೆ ಉತ್ತರಕರ್ನಾಟಕದಲ್ಲಿ ಆಯುಕ್ತರ ಕಚೇರಿಯನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಆಯುಕ್ತರ ಕಚೇರಿಯನ್ನು ಧಾರವಾಡದಲ್ಲೋ ಹುಬ್ಬಳ್ಳಿಯಲ್ಲೋ ತೆರೆಯುತ್ತೇವೆಂದು ಹೇಳಿದ್ದಾರೆ. ಹೀಗೆ ನಮ್ಮ ರಾಜ್ಯದಲ್ಲಿ ಇನ್ನೊಂದಷ್ಟು ಕಚೇರಿಗಳನ್ನು ವ್ಯಾಪಕವಾಗಿ ತೆರೆಯುವುದರಿಂದ ಆಯುಕ್ತರಂತಹ ಒಂದು ಹುದ್ದೆಯನ್ನು ಜಾಸ್ತಿ ಮಾಡುವುದರಿಂದ ಆ ಭಾಗಕ್ಕೇನು ನ್ಯಾಯ ದೊರಕಿಸುತ್ತೇವೆ ಅಂತ ಹೇಳಲಿಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಕಚೇರಿಯನ್ನು ಆಯುಕ್ತರನ್ನು ಅಥವಾ ಸಿಬ್ಬಂದಿಯನ್ನು ಜಾಸ್ತಿ ಮಾಡಬಹುದೇ ವಿನಾಃ ಆ ಭಾಗಕ್ಕೆ ಒಂದು ಒಳ್ಳೆಯ ಅವಕಾಶವನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲ. ಅದು ಏನು ಶೈಕ್ಷಣಿಕವಾಗಿ ಹಿಂದುಳಿದಿದೆ ಆ ಭಾಗಕ್ಕೆ ಬೇಕಾಗಿರುವಂತಹದು ಇವತ್ತು ಆ ಭಾಗದ ಅನೇಕ ಶಾಸಕರು ಹೇಳುತ್ತಾ ಇರುತ್ತಾರೆ ಮತ್ತು ನಾವು ಅಲ್ಲಿ ಟೂರ್ ಮಾಡಿದಾಗ ನೊಡಿರುವಂಥದ್ದು ಅಂದರೆ ಶಾಲಾ ಕೊಠಡಿಗಳಿಲ್ಲ, ಇದ್ದರೂ ಕೂಡ ಅಲ್ಲಿ ಪಾಠೋಪಕರಣಗಳು ಪೀಠೋಪಕರಣಗಳು ಇವತ್ತು ಇಲ್ಲ. ಅವುಗಳನ್ನು ಒದಗಿಸಿಕೊಡಿ ಅಂತ ಕೇಳುತ್ತಿದ್ದರೆ ವಿನಹ ಅವರು ಕೇಳಿದ್ದನ್ನು ಬಿಟ್ಟು ಮತ್ತೆಲ್ಲವನ್ನೂ ಸರ್ಕಾರ ಇವತ್ತು ಹೇಳುತ್ತಾ ಇದೆ. ಆಯುಕ್ತರ ಕಚೇರಿಯನ್ನು ಒದಗಿಸುವುದರಿಂದ ಏನೋ ಮಹಾ ಆಗುತ್ತದೆ ಎಂಬುದು ಏನೂ ಇಲ್ಲ ಅಧ್ಯಕ್ಷರೇ, ಹಾಗಾಗಿ ಇರುವಂತಹ DDPI ಕಚೇರಿ Joint Director ಕಚೇರಿಗಳ ಮೂಲಕ ಅಲ್ಲಿನ ಆಡಳಿತವನ್ನು ನಡೆಸಲಿಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಏನೋ ಮಹಾ ಕೊಟ್ಟಿದ್ದೇವೆ ಎಂದು ನಮ್ಮ ಸರ್ಕಾರ ಹೇಳಬಹುದೇ ವಿನಾಃ ಇದರಿಂದಾಗಿ ಅವರಿಗೆ ಅನುಕೂಲವಾಗುತ್ತದೆ ಎನ್ನುವುದಕ್ಕಿಂತ ಸರ್ಕಾರದ ಅಧಿಕಾರಿಗಳು ಸಿಬ್ಬಂದಿಯನ್ನು ಜಾಸ್ತಿ ಮಾಡಿದಹಾಗಾಗುತ್ತದೆ ಅದಕ್ಕೊಂದಷ್ಟು ಹಣದ ಹೊರೆ ಹೊರಿಸದ ಹಾಗೆ ಆಗುತ್ತದೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಳೆದ ಸಲದ ಬಜೆಟ್‌ನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನಿಗದಿ ಮಾಡಿರುವುದಕ್ಕಿಂತ ಸುಮಾರು 133 ಕೋಟಿ ರೂ.ಗಳನ್ನು ಕಡಿಮೆ ಕೊಟ್ಟಿದ್ದಾರೆ. ನಾನು ನಿನ್ನೆ ಅನೇಕ ವಿಚಾರಗಳನ್ನು ಹೇಳಿದೆ. ಈ ಸರ್ಕಾರ ಹೇಳುವ ಸರ್ಕಾರವೇ ಹೊರತು ಮಾಡುವ ಸರ್ಕಾರವಲ್ಲ ಅಂತ. ಅನೇಕ ವಿಚಾರಗಳು ಹಾಗೇ ಆಗುತ್ತವೆ. ಇವತ್ತು ಉನ್ನತ ಶಿಕ್ಷಣ, CET ಗೊಂದಲ ಇದೆ, ಹಾಗೇನೇ ಅನುದಾನವನ್ನು ಕಡಿತ ಮಾಡುತ್ತೇವೆ ಅಂತ ಹೇಳಿ ಈಗಾಗಲೇ ಹೇಳಿಕೆಗಳನ್ನು ನಮ್ಮ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಅನುದಾನಿತ ಸಂಸ್ಥೆಗಳಿಗೆ ಇನ್ನು ಮೇಲೆ ಅನುದಾನ ಕೊಡುವುದಿಲ್ಲ ಎಂದು. ಇದರಿಂದಾಗಿ ಬಹಳ ಶಿಕ್ಷಣ ಸಂಸ್ಥೆಗಳು ಈಗಾಗಲೇ ಚಡಪಡಿಸುತ್ತಾ ಇವೆ. ಏನೋ ಒಂದು ಅನಾಹುತ ಆಗಿಹೋಗುತ್ತದೆ ಅಂತ. ಎಲ್ಲಕ್ಕಿಂತ ಹೆಚ್ಚಾಗಿ ಅಧ್ಯಕ್ಷರೇ,ಈ ಈ ರೀತಿಯ ಹೇಳಿಕೆಗಳಿಂದ ಅಲ್ಲಿರುವ ಬಡವರ ಮಕ್ಕಳಿಗೇನು ಉನ್ನತ ವ್ಯಾಸಂಗ ಸಿಕ್ಕಬೇಕಾಗಿತ್ತು ಕನಿಷ್ಟ ಒಂದು ಪದವಿ ತರಗತಿವರೆಗೂ ಓದುತ್ತೇವೆ ಎಂಬ ಆಕಾಂಕ್ಷೆ ಹೊತ್ತು ಬಡವರ ಮಕ್ಕಳು ಕೂಲಿಗಾರರ ಮಕ್ಕಳು ಕೂಡ. ವಂಚಿತರಾಗುತ್ತಾರೆ. ಒಂದು ಕಾಲದಲ್ಲಿ ಈ ಪದವಿ ಕಾಲೇಜುಗಳಿದ್ದುದು ಬಹಳ ಶ್ರೀಮಂತರಿಗೆ ಮಾತ್ರ ಇದ್ದವು. ಕೂಲಿಕಾರರ ಮಕ್ಕಳು ನಮ್ಮ ಸಾಹುಕಾರರ ಮಗ ಇಂತಹದು ಓದುತ್ತಿದ್ದಾನೆ ಅಂತ ಹೇಳಿ ಸಂತೋಷಪಟ್ಟುಕೊಂಡು ಮಣ್ಣುಹೆಡಿಗೆ ಹೊರುತ್ತಾ ಇದ್ದರು. ಹಳ್ಳಿಗಳಲ್ಲಿ, ಆದರೆ ಇವತ್ತು ಆ ಕೂಲಿಕಾರ ಕೂಡ ತನ್ನ ಮಗಳನ್ನು ಓದಿಸಬೇಕು ತಾನು graduation

ಮಾಡಿಸಬೇಕು ಎಂಬ ಹಂತದಲ್ಲಿ ಆ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ಕಡಿತ ಮಡುತ್ತೇನೆ ಎನ್ನುವಂತಹ ಸರ್ಕಾರದ ಇಂತಹ ಹೇಳಿಕೆಗಳಿಂದಾಗಿ ಇವತ್ತು ನಮಗೆ ಒಳ್ಳೆಯದಾಗುತ್ತದೆ ಎಂಬುದೇನೂ ಇಲ್ಲ. ಇವತ್ತಿನ ಸಾಮಾಜಿಕ ನ್ಯಾಯದ ದೃಷ್ಟಿಯಿಂದಲೂ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವರು ಕಳೆದ ಸಲ ಹೇಳಿದ್ದರು; ಹೊಸ ಕಟ್ಟಡಗಳಿಲ್ಲ ಯಾವ ಸರ್ಕಾರಿ ಕಾಲೇಜುಗಳಿಗಿಲ್ಲ ಅದಕ್ಕೆ ಬೇರೆಬೇರೆ ಸಂಘಸಂಸ್ಥೆಗಳಿಂದ ಆರ್ಥಿಕ ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ಪಡೆದು ನಾವು ಆ ಕಟ್ಟಡಗಳನ್ನೆಲ್ಲಾ ಪೂರ್ಣ ಮಾಡುತ್ತೇವೆ ಅಂತ. ಆದರೆ ಈ ಸಾರಿ ನಿನ್ನೆ ನಾನು ಇವರು ಏನೇನು ಹೇಳಿದ್ದಾರೆ ಏನೇನು ಅನುಷ್ಠಾನ ಮಾಡಿದ್ದಾರೆ ಅಂತ ಕಣ್ಣಾಡಿಸುತ್ತಿದ್ದೆ ಅಧ್ಯಕ್ಷರೇ. ನಮ್ಮ ಸರ್ಕಾರದ Action taken report ನ್ನು ನೋಡುತ್ತಾ ಇದ್ದೆ. ಬಹಳ ಆಶ್ಚರ್ಯಕರವಾದ ಅನೇಕ ಸಂಗತಿಗಳು ಅದರಲ್ಲಿ ಬಂದಿವೆ. ಹೋದ ಸಾರಿ ಬಜೆಟ್‌ನಲ್ಲಿ ಹೇಳುತ್ತಾರೆ, ಒಂದು ವರ್ಷದ ನಂತರ ಒಬ್ಬ consultant ನ್ನು ನೇಮಕ ಮಾಡಿದ್ದೇವೆ, ಬಜೆಟ್‌ನಲ್ಲಿ ಘೋಷಣೆ ಮಾಡಿದ ಒಂದು ವರ್ಷದ ನಂತರ ಏನಾಗಿದೆ ಏಂದು ಕೇಳಿದರೆ ಒಬ್ಬ consultantನ್ನು ಇವರು ನೇಮಕ ಮಾಡಿದ್ದಾರಂತೆ, ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯುವುದಕ್ಕೆ ಮತ್ತು ಕಾಲೇಜು ಕಟ್ಟಡ ಕಟ್ಟಲಿಕ್ಕೆ consultantಗೆ ಒಂದಷ್ಟು ದುಡ್ಡು ಕೊಟ್ಟು ನೇಮಕ ಮಾಡಿರುವಂತಹದು ಇವರ ಸಾಧನೆ ಒಂದು ವರ್ಷದ ನಂತರ, ಅಧ್ಯಕ್ಷರೇ ಅನೇಕ ವಿಚಾರಗಳಿವೆ, ಯಾಕೆ ಹೇಳುತ್ತಾ ಇದ್ದೇನೆ ಅಂದರೆ ನಾನು ನಿನ್ನೆ ಹೇಳಿದೆ, ಬಜೆಟ್‌ನಲ್ಲಿ ಅನವಶ್ಯಕ ಘೋಷಣೆಗಳು, ಬಜೆಟಿನ ಒಂದು ಕುತೂಹಲ ಏನಿದೆ ಜನರಿಗೆ, ಈ ಬಜೆಟ್ ಬರುವಂತಹದನ್ನು ನಿರೀಕ್ಷೆ ಮಾಡುತ್ತಾ ಇದ್ದರು ಹಿಂದೆಯೆಲ್ಲಾ. ಒಂದು ಬದಲಾವಣೆಯನ್ನು ಬಯಸುತ್ತಾ ಇದ್ದರು. ಏನೋ ಒಂದು ಆಗುತ್ತದೆ ಬದಲಾವಣೆಗೋಸ್ಕರ ಅಭಿವೃದ್ಧಿಗೋಸ್ಕರ ಈ ಬಜೆಟ್ ಬರುತ್ತದೆ ಅಂತ. ಆದರೆ ಇದುವರೆಗೂ ಮಾಡಿರುವ ಬಜೆಟ್‌ಗಳಲ್ಲಿ ವಿಶೇಷವಾಗಿ 2002-03 ರಲ್ಲಿ ಘೋಷಣೆ ಮಾಡಿದರು ಇವರು; ವನವಿಕಾಸ ಯೋಜನೆ ಅಂತ ಒಂದು ಯೋಜನೆಯನ್ನು ಘೋಷಣೆ ಮಾಡಿದರು. ನಮ್ಮ ಆದಿಚುಂಚನಗಿರಿ ಸ್ವಾಮೀಜಿಯವರ ಟ್ರಸ್ಟನ್ನು ಕೂಡ ಹೊಂದಾಣಿಕೆ ಮಾಡಿಕೊಂಡು ನಾವು ಐದಾರು ಕೋಟಿ ರೂಗಳನ್ನು ವಿನಿಯೋಗ ಮಾಡಿ ಈ ರಾಜ್ಯದಲ್ಲಿ ಸಸಿಗಳನ್ನು ನೆಡಿಸುತ್ತೇವೆ, ಬೇರೆ ಬೇರೆ ಸರ್ಕಾರಿ ಕಚೇರಿಗಳಲ್ಲಾಗಲೀ ಸಾರ್ವಜನಿಕರ ಒಂದು ಸಹಯೋಗದೊಂದಿಗೆ ಸಸಿಗಳನ್ನು ನೆಡಿಸುವಂತಹ ಒಂದು ವ್ಯವಸ್ಥೆ ಮಾಡುತ್ತೇವೆ ಅಂತ ಹೇಳಿದರು. ಈಗ ಅದರ ಫಲಿತಾಂಶವನ್ನು ನೋಡಿದರೆ ಆ ಸಸಿ ಬೆಳೆಸಿರುವವರಿಗೆ ಹಣ ಕೊಡಲಿಲ್ಲ. ಆ ಸಸಿಗಳನ್ನು ಬೆಳೆಸಿರುವ ಅನೇಕ ಕೂಲಿಕಾರರಿಗೆ ಏಳು ತಿಂಗಳಿಂದ ಸಂಬಳ ಕೊಡಲಿಲ್ಲ ಅಧ್ಯಕ್ಷರೇ, ಇವರು ಹೇಳುತ್ತಾರೆ, 3 ಕೋಟಿ ರೂಗಳನ್ನು ಅದಕ್ಕೆ ಇಟ್ಟುಕೊಂಡಿದ್ದೇವೆ ಅಂತ. ಮೂರು ಕೋಟಿ ರೂಯಲ್ಲಿ ಇವತ್ತಿಗೆ ಮೂರು ಕಾಸನ್ನೂ ರಿಲೀಸ್ ಮಾಡಲಿಲ್ಲ. ಇದರ ಪರಿಣಾಮ 7 ತಿಂಗಳಿಂದ ಸಂಬಳ ಕೊಡದೇನೇ ಸಾರಿಗೆ ಕೊಡದೇನೆ ಅಲ್ಲಿ ಯಾರು ಅಡ್ವಾನ್ಸಾಗಿ ಖರ್ಚು ಮಾಡಿದ್ದಾರೆ RFO ಗಳಿಗೆ ಹಣ ಕೊಡದೇನೇ ವನವಿಕಾಸ ಯೋಜನೆ ಒಣವಿಕಾಸ ಯೋಜನೆಯಾಗಿದೆ. ನಿಜವಾಗಿಯೂ ವನವಿಕಾಸ ಯೋಜನೆ ಆಗಲಿಲ್ಲ. ಇನ್ನೊಂದು Kannada culture ಇಲಾಖೆ. ನಮ್ಮ ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ಒಂದು ಹೇಳಿದರು. ಪರಂಪರೆ ಅಂತ ಒಂದು ಹೊಸ ಯೋಜನೆ ಮಾಡುತ್ತೇವೆ ಅಂತ ಹೇಳಿದರು. ಒಂದು ವರ್ಷದ ನಂತರ ಇದಕ್ಕಾಗಿ ಯಾವ ಹಣವೂ ಕೂಡ ಬಿಡುಗಡೆಯಾಗಲಿಲ್ಲ. ಮತ್ತೆ ಏನು ಮಾಡಿದ್ದೇವೆ ಅಂದರೆ ಈ action taken

report ನಲ್ಲಾಗಲೀ ಇನ್ನೆಲ್ಲೇ ಆಗಲೀ ಏನೂ ಕಾಣುವುದಿಲ್ಲ. 4 ಕೋಟಿ ರೂಗಳನ್ನು ಈ ಪರಂಪರೆ ಎಂದು ಹೊಸ ಹೆಸರನ್ನು ಕೊಟ್ಟಿದ್ದರು ಅದಕ್ಕೆ ವಿನಿಯೋಗ ಮಾಡುತ್ತೇವೆ ಎಂದು. ಒಂದು ಪೈಸೆಯನ್ನೂ ಕೂಡ ಬಿಡುಗಡೆ ಮಾಡದೆ ಅದು ನಿಷ್ಪರಂಪರೆಯಾಗಿ ಹೋಗಿಬಿಟ್ಟಿದೆ ನಮ್ಮ ಸರ್ಕಾರದ ಯೋಜನೆಗಳಲ್ಲಿ. ನಮ್ಮ ವಕ್ಫ್ ಬೋರ್ಡಿಗೆ ಅಧ್ಯಕ್ಷರೇ 2002 03ರಲ್ಲಿ 12 ಕೋಟಿ. ರೂಗಳನ್ನು ಇಟ್ಟುಬಿಟ್ಟು ಅಲ್ಪಸಂಖ್ಯಾತರಿಗೆ ಇಂತಹ ಒಂದು ಒಳ್ಳೆಯದನ್ನು ಮಾಡುತ್ತೇವೆ ಅಂತ ಹೇಳಿದ್ದರು. ವಕ್ಫ್ ಸಚಿವರಿದ್ದಾರೆ. ನಮಗೆ ಹೇಳಬೇಕು. ಅವರು ಈಗ ಅಲ್ಪಸಂಖ್ಯಾತರನ್ನೆಲ್ಲಾ vote bank ಮಾಡಿಕೊಂಡು ಬಿಟ್ಟಿದ್ದಾರೆ. ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ಹೇಳುತ್ತಾ ಇದ್ದರು; ಒಂದು ಉರ್ದು ಅಕಾಡೆಮಿಯನ್ನು ತೆರೆಯುತ್ತೇವೆ ಅಂತ. ಬಹಳ ಚೆನ್ನಾಗಿ ಹೇಳಿದರು. ಪಾಟೀಲ ಪುಟ್ಟಪ್ಪನವರು, ಇಲ್ಲಿ ಉರ್ದು ಮಾತನಾಡುವ ಯಾರು ಮುಸಲ್ಮಾನ ಅಲ್ಪಸಂಖ್ಯಾತ ಬಂಧುಗಳಿದ್ದಾರೆ ಅವರು ಕನ್ನಡದ ಮಣ್ಣಿನ ಮಕ್ಕಳು ಇದ್ದಾರೆ, ಅವರಿಗೆ ಪ್ರತ್ಯೇಕವಾದ ಅಕಾಡೆಮಿ ಅವಶ್ಯಕತೆ ಇಲ್ಲ. ಕನ್ನಡವನ್ನು ಮಾತನಾಡುತ್ತಾರೆ ಅವರೆಲ್ಲಾ ನಿವೇನು ಹೇಳಿದ್ದೀರಿ ಅದಕ್ಕೆ ಬಹಳ ಚೆನ್ನಾಗಿ ಅವರು ಉತ್ತರ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರು. ಇವತ್ತು ಹೇಳುತ್ತೀರಿ, 12 ಕೋಟಿ ರೂಗಳನ್ನು ನಾವು ವಿನಿಯೋಗ ಮಾಡಿ ಅಲ್ಪಸಂಖ್ಯಾತರ ಆನೇಕ ಸಂಸ್ಥೆಗಳಿಗೆ ಒಳ್ಳೆಯದನ್ನು ಮಾಡುತ್ತೇವೆ ಅವರಿಗೆ ಅನೇಕ ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ಮಾಡುತ್ತೇವೆ ಅಂತ. ನಾನು action taken report ನಲ್ಲಿ ನೋಡುತ್ತಾ ಇದ್ದೆ ಅಧ್ಯಕ್ಷರೇ, ಹೋದ ಸಾರಿ ಬಜೆಟ್‌ನಲ್ಲಿ 12 ಕೋಟಿ ರೂ. ಪ್ರಸ್ತಾಪ ಮಾಡಿದ್ದಿರಿ, ಘೋಷಣೆ ಮಾಡಿದ್ದು 12 ಕೋಟಿ ರೂ. ಆಮೇಲೆ ನಿಗದಿಪಡಿಸಿದ್ದು 5 ಕೋಟಿ ರೂ. ಹೇಗಿದೆ ನೋಡಿ ಇದು, ಆದರೆ ಬಿಡುಗಡೆ ಮಡಿರುವುದು ಮಾತ್ರ 2 ಕೋಟಿ ರೂ. ಇದು ಅಲ್ಪಸಂಖ್ಯಾತರ ಕಲ್ಯಾಣದ ಒಂದು ಸ್ಯಾಂಪಲ್ ಅಷ್ಟೇ. ಸರ್ಕಾರದ್ದು ತಾವು ಹಿಂದಿನ ಬಜೆಟ್ ನಲ್ಲಿ ಸಾಕಷ್ಟು ಉಲ್ಲೇಖ ಮಾಡಿದ್ದೀರಿ, ತೆರಿಗೆ ಸುಧಾರಣಾ ಆಯೋಗದ ವರದಿಯನ್ನು ಉಲ್ಲೇಖಿಸಿ ನೋಂದಣಿ ಕಚೇರಿಗಳನ್ನು ಬಹಳ ಗಟ್ಟಿಮುಟ್ಟು ಮಾಡುತ್ತೇವೆ, ಅಲ್ಲಿಗೆ ಸಿಬ್ಬಂದಿಯನ್ನು ಸಾಕಷ್ಟು ನೇಮಕ ಮಾಡುತ್ತೇವೆ, ಆಂತರಿಕವಾಗಿರುವ ಆಡಿಟನ್ನು ಮಾಡುತ್ತೇವೆ, ಆಧುನಿಕ ಉಪಕರಣಗಳಿಂದಾಗಿ ಅಲ್ಲಿ ಸುಸಜ್ಜಿತ ನೋಂದಣಿ ಕಚೇರಿಗಳನ್ನು ಮಾಡುತ್ತೇವೆ, sub registrar ಕಚೇರಿಗಳನ್ನು ಮಾಡುತ್ತೇವೆ ಅಂತ. ಈಗ ನಿಮ್ಮ action taken report, ಬಗ್ಗೆ ನಾನು ಬೇರೆ ಏನೂ ಮಾತನಾಡುವುದಿಲ್ಲ, ಯಾಕೆಂದರೆ ಒಂದೊಂದು ವರ್ಷದ ಬಜೆಟ್ ನಲ್ಲೂ ಏನಾಗುತ್ತದೆ ಎನ್ನುವುದಕ್ಕೆ ಯಾವ ಹಾದಿ ಹಿಡಿಯುತ್ತವೆ ಎನ್ನುವುದಕ್ಕೆ ಇಂತಹವೆಲ್ಲಾ ಜ್ವಲಂತ ಉದಾಹರಣೆಗಳು ನಮಗೆ, ಇದರಲ್ಲೇ ಇದೆ, ನಾನೇನು ಬೇರೆ ಹೇಳುತ್ತಾ ಇಲ್ಲ, ಇವರು ಕೊಟ್ಟಿರುವ action taken report ಸಲ್ಲಿ ದಯವಿಟ್ಟು ತಾವು ನೋಡಬೇಕಾಗುತ್ತದೆ, ಇವತ್ತು ಏನೂ ಇಲ್ಲ ಸರ್ ವರದಿ ತರಿಸಿಕೊಂಡಿದ್ದೇವೆ, ಒಂದು ದಮ್ಮಡಿ ಅದಕ್ಕೆ ಬಿಡುಗಡೆ ಮಾಡಲಿಲ್ಲ, ವರದಿ ತರಿಸಿಕೊಂಡಿದ್ದೇವೆ, ಆದರೆ ಆ ವರದಿ ಸಾಕಾಗಲಿಲ್ಲವಂತೆ. ಆದ್ದರಿಂದ ಇನ್ನೊಂದು ವರದಿಯನ್ನು ತರಿಸಿಕೊಳ್ಳುವ ಸನ್ನಾಹದಲ್ಲಿದ್ದೇವೆ. ಇದರಲ್ಲಿ ಬರೆದಿದೆ. ಒಂದು ವರ್ಷದ ನಂತರ ಇಂತಹ ಭರವಸೆಗಳು ಎಷ್ಟು ಪೊಳ್ಳಾಗಿದ್ದಾವೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಅಧ್ಯಕ್ಷರೇ ಹೋದ ಸಲ ಹೇಳಿದರು, ಗ್ರಾಮದ ಕೆರೆಗಳನ್ನು ಗ್ರಾಮಪಂಚಾಯ್ತಿಗಳಿಗೆ ಕೊಟ್ಟು ಉತ್ಪನ್ನವನ್ನು ಬಳಸಿಕೊಂಡು ಸಂಪನ್ಮೂಲವನ್ನು ಹೆಚ್ಚಿಸಲು ಅನುವು ಮಾಡಿಕೊಡಲು

ಯೋಚಿಸಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದರು. ಬಜೆಟಿನ ಭಾಷಣದಲ್ಲಿ ಈಗ action taken report ನಲ್ಲಿ ಒಂದು ವರ್ಷದ ನಂತರ ಹೇಳುತ್ತಾರೆ, ಪರಿಶೀಲನೆಯಲ್ಲಿ ಇದೆ, ಎಂದು ಹಾಗಾದರೆ ಯಾತಕ್ಕಾಗಿ ನೀವು ಬಜೆಟನ್ನು ಮಂಡನೆ ಮಾಡಬೇಕು?

6.20 ಪಿಎಂ

ಇನ್ನು ಅನೇಕ ಇದ್ದಾವೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಬಗ್ಗೆ ಕಳೆದ ಸಾರಿ ಹೇಳಿದ್ದಿರಿ. 172 ಹಾಸ್ಟೆಲ್ ಗಳ ಕೆಲಸವನ್ನು ಪೂರ್ಣಗೊಳಿಸುವುದಕ್ಕಾಗಿ ಮತ್ತು ಹೊಸ ಹಾಸ್ಟೆಲ್ ಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದಿರಿ. ಅದಕ್ಕಾಗಿ ಹಣವನ್ನು ಇಡುತ್ತೇವೆ, ಹಾಸ್ಟೆಲ್ ಗಳನ್ನು ಪೂರ್ಣ ಮಾಡುತ್ತೇವೆ ಎಂದು ಹೇಳಿದ್ದಿರಿ. ನೀವು ಮಾಡಿದ್ದು ಎಷ್ಟು? ಒಂದು ವರ್ಷದ ನಂತರ ಈಗಿನ ಆ್ಯಕ್ಷನ್ ಟೇಕನ್ ರಿಪೋರ್ಟ್‌ನಲ್ಲಿ ಇವತ್ತಿನವರೆಗೆ ಕಂಪ್ಲೀಟ್ ಆಗಿರತಕ್ಕಂಥದ್ದು 172 ರಲ್ಲಿ ಕೇವಲ 30 ಮಾತ್ರ. ಸರ್ಕಾರಕ್ಕೆ ಒಂದು ವರ್ಷದ ಅವಧಿ ಇಡೀ ದೊಡ್ಡ ಸರ್ಕಾರಕ್ಕೆ 172 ಹಾಸ್ಟೆಲ್‌ಗಳ ಆನ್ ಗೋಯಿಂಗ್ ವರ್ಕ್ಸ್ ಇರುವ ಹಾಸ್ಟೆಲ್‌ಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲವೇ? ಹಾಗಾದರೆ ನೀವು ಹಿಂದುಳಿದ ವರ್ಗದ ಮಕ್ಕಳಿಗೆ ಮಾಡುವಂಥದ್ದು ಏನನ್ನು? ಯಾವಾಗ ಹಾಸ್ಟೆಲ್ ಗಳಿಗೆ ಆ ಮಕ್ಕಳುಗಳು ಹೋಗಬೇಕು? 172 ಹಾಸ್ಟೆಲ್‌ಗಳ ಕೆಲಸವನ್ನು ಪೂರ್ಣ ಮಾಡುವುದಕ್ಕೆ ನಿಮಗೆ ಒಂದು ವರ್ಷ ಸಾಕಾಗುವುದಿಲ್ಲ ಎಂದು ಹೇಳಿದರೆ ನಿಮಗೆ ಎಷ್ಟು ವರ್ಷದ ಅವಧಿ ಬೇಕಾಗಿತ್ತು ಎಂದು ನಿಮ್ಮ ಬಜೆಟ್ ಬಜೆಟ್ ಭಾಷಣದಲ್ಲಿ ಹೇಳಬೇಕಾಗಿತ್ತು. ಒಂದು ವರ್ಷದೊಳಗಾಗಿ ಪೂರ್ಣ ಮಾಡುತ್ತೇವೆ, 172 ಹಾಸ್ಟೆಲ್‌ಗಳನ್ನು ಒಂದು ವರ್ಷದಲ್ಲಿ ಮುಗಿಸುತ್ತೇವೆ ಎಂದು ಆ ರೀತಿಯಾಗಿ ನೀವ್ಯಾಕೆ ಹೇಳಿದಿರಿ? ಇವತ್ತು ಏಕೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಸ್ಪಷ್ಟಪಡಿಸತಕ್ಕ ಅವಶ್ಯಕತೆ ಇದೆ. ಕಳೆದ ಸಾರಿ ಹೇಳಿದ್ದಿರಿ. ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 72 ಕಾಮಗಾರಿಗಳು ನೀರು ಸರಬರಾಜು ಯೋಜನೆಗಳು, 7 ಒಳಚರಂಡಿ ಯೋಜನೆಗಳು, 798.52 ಕೋಟಿ ರೂ.ಗಳಲ್ಲಿ ಕಾರ್ಯಗತಗೊಳಿಸುತ್ತಿದ್ದೇವೆ ಎಂದು ಹೇಳಿದ್ದಿರಿ. ಈಗ ಆ್ಯಕ್ಷನ್ ಟೇಕನ್ ರಿಪೋರ್ಟ್‌ನಲ್ಲಿ ಬರುತ್ತಿದೆ, ಎಷ್ಟು ಪೂರ್ಣಗೊಳಿಸಲಾಗಿದೆ ಎಂದು ಹೇಳಿದರೆ 40ನ್ನು ಮಾತ್ರ ಪೂರ್ಣಗೊಳಿಸಲಾಗಿದೆ. ಹಣ ಇಲ್ಲವೇ ನಿಮಗೆ? ಬೇರೆ ಬೇರೆಯದಕ್ಕೆಲ್ಲಿ ಹಣ ಇದೆ. ಇರುವಂಥ ಹಣವನ್ನು ಖರ್ಚು ಮಾಡಿ ಒಂದು ವರ್ಷದಲ್ಲಿ 72 ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಆಗುವುದಿಲ್ಲವೆಂದಾದರೆ ಹಾಗಾದರೆ ಆ ಮಂಡಳಿ ಏನು ಕೆಲಸವನ್ನು ಮಾಡುತ್ತಿದೆ? ಎಷ್ಟು ವರ್ಷದ ಯೋಜನೆಗಳು. ಹಾಗಾದರೆ ಈ ರಾಜ್ಯದ ಪ್ರಗತಿ ಎಷ್ಟು ವೇಗವಾಗಿ ಹೋಗುತ್ತಿದೆ ಎಂಬುದನ್ನು ನಾವು ಇದರಿಂದ ನೋಡಬೇಕು. ನೀರಾವರಿ ಅಂದಾಜು ವೆಚ್ಚ 2002-03ನೇ ಇಸವಿಯಲ್ಲಿ ಇವರು ಪ್ರಸ್ತಾಪ ಮಾಡಿದರು. ಅಂದಾಜು ವೆಚ್ಚವನ್ನು 2798 ಕೋಟಿ ರೂಗೆ ನಿಗದಿಮಾಡಿದ್ದೇನೆ ಎಂದು ಹೇಳಿ ಹೇಳಿದರು. ಒಂದು ವರ್ಷದ ನಂತರ ಬಿಡುಗಡೆಯಾಗಿರುವ ಹಣವೆಷ್ಟು ಎಂದರೆ 1507 ಕೋಟಿ ರೂ. ನಿಗದಿ ಮಾಡಿರುವುದು 2790 ಕೋಟಿ. ರೂ. ಬಿಡುಗಡೆ ಮಾಡಿರುವುದು 1507 ಕೋಟಿ ರೂ. ಇದರಿಂದಾಗಿ ಅವರು ಹೇಳಿದ್ದರು, 2790 ಕೋಟಿ ರೂ.ಗಳನ್ನು ಉಪಯೋಗಿಸಿ ಆರು ಲಕ್ಷ ಎಕರೆಗೆ ನೀರಾವರಿ ಮಾಡುತ್ತೇವೆ. ಎಂದು ಒಂದು ವರ್ಷದಲ್ಲಿ ಹೇಳಿರತಕ್ಕ ಮಾತು. ಇದು ಆಗಲಿಲ್ಲ ಇವರಿಂದ. ಕೇವಲ 1507 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ 2.40 ಲಕ್ಷ ಎಕರೆಗಳನ್ನು ಮಾತ್ರ ಅಂದರೆ ಕೇವಲ 30 ಪರ್‌ಸೆಂಟ್

ಅಚೀವ್ ಮೆಂಟ್. ಹಾಗಾದರೆ ಇದೇ ವಾದರ ವೇಗ ಯಾವ ದಿಕ್ಕಿಗೆ ಹೋಗುತ್ತಿದೆ? ಇದನ್ನು ಏಕೆ ಪ್ರಸ್ತಾಪಮಾಡುತ್ತೀರಿ? ಇನ್ನೊಂದು ಕಾವೇರಿ ಕಣಿವೆ ಬಗ್ಗೆ ಈ ಸಾರಿ ಕೂಡ ಪ್ರಸ್ತಾಪ ಮಾಡಿದ್ದಾರೆ. ಕಾವೇರಿ ಕಣಿವೆ ಯೋಜನೆ ಹಿಂದಿನ ಬಜೇಟ್‌ನಲ್ಲಿ ತಾವು ಘೋಷಣೆಯನ್ನು ಮಾಡಿದ್ದೀರಿ. 300 ಕೋಟಿ ರೂ.ಗಳನ್ನು ನಿಗದಿ ಮಾಡುತ್ತೇವೆಂದು ಹಿಂದಿನ ಬಜೆಟ್‌ನಲ್ಲಿ ಹೇಳಿದ್ದೀರಿ. ಏತಕ್ಕೆ ಆಗಲಿಲ್ಲ ನಿಮಗೆ? ಕೇವಲ ಬಿಡುಗಡೆಯಾಗಿರುವುದು ಒಂದು ವರ್ಷದ ನಂತರ 130 ಕೋಟಿ ರೂ. ಮಾತ್ರ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗಿರತಕ್ಕ ಹಣ. ನಾನು ಹೇಳುತ್ತೇನೆ, ಕಾವೇರಿ ನಿಮ್ಮ ಭಾಗದ್ದು. ನಿಮ್ಮ ಸಾರ್ವಜನಿಕ ಜೀವನವನ್ನು ರೂಪಿಸಿರುವ ಆ ಭಾಗ ಅದು. ನೀವು 300 ಕೋಟಿ ರೂ.ವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ ಒಂದು ಯೋಜನೆಯನ್ನು ತಯಾರಿಸಿ ಬಿಡುಗಡೆ ಮಾಡುತ್ತೇನೆಂದು ಹೇಳಿದವರು ಏಕೆ ಇದನ್ನು ಕಾರ್ಯಗತ ಮಡುವುದಕ್ಕೆ ಸದ್ಯವಾಗಲಿಲ್ಲ? ಆ ಭಾಗದ ರೈತರ ಸಮಸ್ಯೆಗಳ ಅರಿವು ನಿಮಗಿಲ್ಲವೇ? ಅಥವಾ ಅವರನ್ನು ಹಾಗೆಯೇ ಭ್ರಮೆಯಲ್ಲಿಡಬೇಕೆನ್ನುವುದು ನಿಮ್ಮ ಉದ್ದೇಶವೇ? ಕೇವಲ 130 ಕೋಟಿ ರೂಪಾಯಿಗಳನ್ನು ಮಾತ್ರ ಇದುವರೆಗೆ ಬಿಡುಗಡೆ ಮಾಡಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವ ಬಗ್ಗೆ. ಇದನ್ನು ಯಾರೂ ಕೇಳಿರಲಿಲ್ಲ. ಬಹಳ ಒಳ್ಳೆಯ ಪಬ್ಲಿಸಿಟಿ ಬಂತು. ನನಗೆ ಆಶ್ಚರ್ಯವಾಗುವುದು ಇದೇ ಅಧ್ಯಕ್ಷರೇ. ಏನನ್ನು ಭ್ರಮಾತ್ಮಕವಾಗಿ ನಮ್ಮ ಸರ್ಕಾರ ಹೇಳುತ್ತದೆ, ಇದಕ್ಕೆ ಸಿಗುವಂಥ ಪಬ್ಲಿಸಿಟಿ ನಮ್ಮ ಮಾಧ್ಯಮಗಳ ಮೂಲಕ, ಇದನ್ನು ನೀವು ಮಾಡಲಿಲ್ಲ ಒಂದು ವರ್ಷದೊಳಗೆ ಎಂದು ಹೇಳಿ ಹೇಳುವಂಥದ್ದಕ್ಕೆ ನಮಗೆ ಸಿಗುವುದಿಲ್ಲ. ನಮ್ಮ ದುರ್ದೈವ. ನಿಮ್ಮ ತಪ್ಪನ್ನು ಎತ್ತಿ ತೋರಿಸತಕ್ಕಂಥ ನೀವು ಹೇಳತಕ್ಕ ಮಾತುಗಳು ಎಷ್ಟು ಹುಸಿ ಎಂದು ಹೇಳತಕ್ಕಂಥದ್ದು ಕೂಡ ಜನರಿಗೆ ಆ ಮೆಸೇಜ್‌ಗಳು ಹೋಗಬೇಕಾಗುತ್ತದೆ. ಇವತ್ತು ನಾನು ಹೇಳುತ್ತಿದ್ದೇನೆ, ನೀವು ಹೇಳಿದಿರಿ, ಏನೆಂದರೆ ಮಕ್ಕಳ ಪೌಷ್ಟಿಕತೆ ಬಗ್ಗೆ "ಅಪೌಷ್ಟಿಕವಾಗಿರುವ ಮಕ್ಕಳ ಪರಿಸ್ಥಿತಿಯ ಬಗ್ಗೆ ನಮಗೆ ಅರಿವಿದೆ. ಇದು ನಮ್ಮ ಪರಮ ಆದ್ಯ ಕರ್ತವ್ಯ. ಅಂಗನವಾಡಿ ಮಕ್ಕಳಿಗೆ ಅಂದರೆ ಜೀರೊದಿಂದ ಮೂರು ವರ್ಷದ ಮಕ್ಕಳಿಗೆ ತಿಂಡಿ ಪೌಷ್ಟಿಕ ಆಹಾರದ ಜೊತೆ ನಮ್ಮ ಮಿಲ್ಕ್ ಯೂನಿಯನ್ ಜೊತೆಗೆ ಸೇರಿ, ಹಾಲು ಒಕ್ಕೂಟದ ಜೊತೆಗೆ ಸೇರಿ ನಾವು ಆ ಮಕ್ಕಳಿಗೆ ಹಾಲನ್ನು ಒದಗಿಸುತ್ತೇವೆ." ನೀವು ಕಳೆದ ಸಾರಿ ಬಜೆಟ್‌ನಲ್ಲಿ ಹೇಳಿರುವಂಥ ಮಾತು. ನಾವಲ್ಲ ಹೇಳಿರತಕ್ಕದ್ದು. 2002-03 ನೇ ಬಜೆಟ್ ನಲ್ಲಿ, ಇದನ್ನು ಓದಬೇಕು, ಪೇಜ್ ನಂ 17. ನಿಮ್ಮ ಸಬ್ಜೆಕ್ಟ್ ನಂಬರ್ 67 ರಲ್ಲಿದೆ. ನಾನು ಆ್ಯಕ್ಷನ್ ಟೇಕನ್ ರಿಪೋರ್ಟ್‌ನಲ್ಲಿ ನಾನು ನೋಡುತ್ತಿದ್ದೆ. ಏನಾಗಿದೆ ಎಂದು ಹೇಳಿ. ಈ ಹಾಳು ಕೊಡುವಂಥ ಯೋಜನೆ ಏನೇನೂ ಆಗಲಿಲ್ಲ. ಒಂದು ಮಗುವಿಗೆ ಒಂದು ಚಮಚ ಹಾಲನ್ನು ಕುಡಿಸುವುದಕ್ಕಾಗಲಿಲ್ಲ. ಹಾಗಾದರೆ ನೀವು ಈ ಘೋಷಣೆ ಮಾಡುವುದಕ್ಕಿಂತ ಮೊದಲು ಯೋಚನೆ ಮಾಡುವುದಿಲ್ಲವೇ? ಮೊದಲು ಘೋಷಣೆ. ಆಮೇಲೆ ಯೋಚನೆ. ಯೋಚನೆ ಮಾಡಿ ನೀವು ಯೋಜನೆಯನ್ನು ತಯಾರು ಮಾಡುವುದಿಲ್ಲ. ಹಾಗಾದರೆ ಮೂರು ನಾಲ್ಕು ವರ್ಷದ ನಂತರವೂ ಕೂಡ ನಿಮ್ಮ ಸರ್ಕಾರ ಇದೇ ರೀತಿ ನಡೆದುಕೊಂಡು ಹೋಗುತ್ತಿದೆ ಎಂದು ಹೇಳಿದರೆ ಒಟ್ಟು ಐದು ವರ್ಷ ಹೇಗಾದರೂ ಮುಗಿಸಬೇಕು ಅಥವಾ ನಮ್ಮ ರಾಜ್ಯದ ಜನರಿಗೆ ನಾವೇನೂ ಮಾಡಿದ್ದೇವೆ ಎನ್ನುವಂಥದ್ದು ಹೇಳುವುದು ಮಾತ್ರ ಗೊತ್ತು ನೀವು ಏನನ್ನು ಕೂಡ ಮಾಡಲಿಲ್ಲ. ನಿಮಗೆ ಆಗದಿದ್ದರೆ ಇವತ್ತು ಹಾಲು ಒಕ್ಕೂಟಗಳು ನಿಮಗೆ ಹಾಲು ಕೊಡುವುದಿಲ್ಲವೆಂದು ಹೇಳಿದವೇ ಅಥವಾ ಆ ಮೂರು

ವರ್ಷದ ಮಕ್ಕಳಿಲ್ಲಾ ಬೇಡ, ಬೇಡ, ನೀವು ಕೊಡುವುದೇ ಬೇಡ ಎಂದು ಹೇಳಿದವೇ? ನಿಮಗೆ ತೊಂದರೆಯಾಯಿತೇ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಮೊಯಿಲಿಯವರ ಕಾಲದಲ್ಲಿ ಮಾಡಿ ಆ ರೊಕ್ಕವನ್ನು ಇನ್ನೂ ತುಂಬಿಲ್ಲ. ಆ ಸೊಸೈಟಿಗಳಿಲ್ಲಾ ಮುಳುಗಿ ಹೋಗುತ್ತಿವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈಗ ಹಾಲು ಜಾಸ್ತಿ ಉತ್ಪಾದನೆಯಾಗಿ ಹಾಲನ್ನು ಗಟಾರಕ್ಕೆ ಚೆಲ್ಲುವಂಥ ಪರಿಸ್ಥಿತಿ ಹಾಲು ಒಕ್ಕೂಟಗಳಿಗೆ ಬಂತು. ಮಿಲ್ಕ್ ಹಾಲಿಡೇಗಳನ್ನು ಡಿಕ್ಲೇರ್ ಮಾಡಿದವು ನಮ್ಮ ಹಾಲು ಒಕ್ಕೂಟಗಳು. ಆದರ ನೆರವಿಗೆ ನೀವು ಹೋಗಲಿಲ್ಲ. ನೀವೇ ಬಜೆಟ್ ನಲ್ಲಿ ಘೋಷಣೆ ಮಾಡಿರತಕ್ಕದ್ದು ಈ ಯೋಜನೆ. ನಿಮಗೆ ಮಾಡುವುದಕ್ಕಾಗಲಿಲ್ಲ. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ನಿಮಗೆ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣವನ್ನು ನೀವು ಜನರಿಗೆ ಹೇಳಬೇಕಾಗುತ್ತದೆ. ನೀವು ಇನ್ನೊಂದು ಕಳೆದ ಸಾರಿ ಹೇಳಿದಿರಿ. ತೆರಿಗೆ ಸುಧಾರಣೆ ಆಯೋಗದ ಶೀಘಾರಸ್ಸಿನಂತೆ ಕಾಕಂಬಿ ತಯಾರಿಕೆ, ಸಂಗ್ರಹಣೆ, ಮಾರಾಟ, ಸಾಗಾಣಿಕೆ ಮತ್ತು ಬಳಕೆ ಬಗ್ಗೆ ಅವಶ್ಯಕವಾದ ಕಾನೂನನ್ನು ತರಲು ಪ್ರಸ್ತಾಪಿಸುತ್ತೇನೆ ಎಂದು ಹೇಳಿದ್ದಿರಿ. ಕಾನೂನನ್ನು ಒಂದು ವರ್ಷದವರೆಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ತಂದಿದ್ದಾರೋ ಅಥವ ಇಲ್ಲವೋ? ಆಕ್ಷನ್ ಟೇಕನ್ ರಿಪೋರ್ಟ್‌ನಲ್ಲಿದೆ. ಇನ್ನು ಮಾಡಬೇಕಾಗಿದೆ ಎಂದು ಹೇಳಿ ಹೇಳಿದ್ದಾರೆ. ಹಾಗಾದರೆ ಒಂದು ವರ್ಷದ ಹಿಂದೆ ಇದೇ ಮಾರ್ಚ್ ತಿಂಗಳಲ್ಲಿ ಮಾಡಿದ ಘೋಷಣೆ ಅನುಷ್ಠಾನಕ್ಕೆ ತರುವುದಕ್ಕೆ ಇದಕ್ಕೇನು ಖರ್ಚುಹಿಡಿಯುತ್ತದೆಯೇ? ನೀವು ಕಾನೂನನ್ನು ತರುವುದಕ್ಕೆ. ಕಾನೂನು ಇಲಾಖೆಯವರಿಗೆ ಹೇಳಿದರೆ ಆಯಿತು, ಬರುತ್ತದೆ. ಇವತ್ತೆಲ್ಲಾ ಬಿಲ್‌ಗಳು ರಾಶಿ ರಾಶಿ ಬರುತ್ತಿದೆ. ಆ ರೀತಿ ಅದೂ ಒಂದು ಬಿಲ್ ಬರುತ್ತಿತ್ತು. ಅಂದರೆ ನಿಮಗೆ ಇಚ್ಛಾಶಕ್ತಿ ಇಲ್ಲ. ನೀವು ತಯಾರು ಮಾಡಿರತಕ್ಕ, ನೀವು ಘೋಷಣೆ ಮಾಡಿರತಕ್ಕ ನೀವು ಜನರಿಗೆ ಕೊಟ್ಟಿರತಕ್ಕ ಈ ಸಂದೇಶದ ಬಗ್ಗೆ ನಿಮಗೆ ಕಳಕಳಿ ಇಲ್ಲ. ಅಥವಾ ನೀವು ಹೀಗೆ ಘೋಷಣೆ ಮಾಡಿರತಕ್ಕಂಥದ್ದು ನಿಮ್ಮನ್ನು ಯಾರೋ ಬಂದು ಭೇಟಿ ಮಾಡಬೇಕು, ಏಕೆಂದರೆ ಈ ಕಾಕಂಬಿ ತಯಾರಕರು, ಮತ್ತು ಸಂಗ್ರಹಣೆಗಾರರು, ಮಾರಾಟಗಾರರು, ಹಾಗಾದರೆ ಇದು ಅನುಮಾನಾಸ್ಪದವಾದ ಸಂಗತಿ. ಈ ಕಾನೂನನ್ನು ತರಲಿಕ್ಕೆ ಇದಕ್ಕೇನು ಖರ್ಚು ಬರುವುದಿಲ್ಲ. ಹಾಗಾದರೆ ನೀವು ಕಾನೂನನ್ನು ಮಾಡಲಿಲ್ಲವೆಂದರೆ ಹಾಗಾದರೆ ಈ ಕಾಕಂಬಿ ಲಾಬಿ ಯಾವುದು ಇದೆ, ಮದ್ಯದ ಲಾಬಿ, ಇದು ಎಲ್ಲೊ ನಿಮ್ಮನ್ನು ಕಟ್ಟಿ ಹಾಕಿದೆ. ಇದು ಎಲ್ಲೋ ನಿಮ್ಮನ್ನು ಬಂಧನಕ್ಕೆ ಒಳಮಾಡಿದೆ. ಇದು ಎಲ್ಲೋ ನಿಮಗೆ ಕೈ ತಡೆದಿದೆ. ಈ ಕಾನೂನನ್ನು ಮಾಡಿದರೆ ನಮಗೆ ತೊಂದರೆಯಾಗುತ್ತದೆ, ನೀವು ಮಾಡಬೇಡಿ ಎಂದು ಹೇಳಿ ಹೇಳಿದ್ದಾರೆ. ಅದಕ್ಕೆ ಮಣಿದಿದ್ದೀರಿ. ಇಲ್ಲದಿದ್ದರೆ ನಿಮಗ್ಯಾಕೆ ಮಾಡಲಿಕ್ಕಾಗಲಿಲ್ಲ ಎನ್ನುವಂಥದ್ದನ್ನು ನೀವು ಹೇಳಬೇಕಾಗುತ್ತದೆ.

ಛೇರ್ಮನ್ : ಮಾನ್ಯ ಜ್ಞಾನೇಂದ್ರರವರೇ, ನಿಮ್ಮ ಪಕ್ಷಕ್ಕೆ 4 ಗಂಟೆ 50 ನಿಮಿಷ ಅಲಾಟ್‌ಮೆಂಟ್ ಮಾಡಿದ್ದೇವೆ. ನೀವು ಈಗಾಗಲೇ 1 ಗಂಟೆ 55 ನಿಮಿಷ ಮಾತನಾಡಿದ್ದೀರಿ. ಇನ್ನೆಷ್ಟು ಸಮಯ ಬೇಕು?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ಇನಿಷಿಯೇಟ್ ಮಾಡಿದ್ದು, ಮುಗಿಸುತ್ತೇನೆ ಸಾರ್. ವಿಶೇಷವಾಗಿ ನಾನು ಹೇಳುವುದು ವಾಣಿಜ್ಯ ತೆರಿಗೆ ಬಗ್ಗೆ. ನಾನು ನೋಡುತ್ತಿದ್ದೆ, ಇದರ ಬಗ್ಗೆ ಅಧ್ಯಯನ ಮಾಡುತ್ತಿದ್ದೆ. ನನಗೆ ಆಶ್ಚರ್ಯವಾಗುವುದು ಎಂದರೆ 28

ಪುಟಗಳ ಒಂದು ಭಾಷಣ. ಈ ಬಜೆಟ್ ಅಲ್ಲ. ಇದರ ಹಿಂದಿನದು ಬಜೆಟ್ 2002-03 ರದು. ವಾಣಿಜ್ಯ ತೆರಿಗೆ ಸುಧಾರಣೆ ಬಗ್ಗೆ 28 ಪುಟಗಳನ್ನು ಮೀಸಲಾಗಿಟ್ಟಿದ್ದಾರೆ. ಭಾರೀ ಇದರಲ್ಲಿ ಏನೋ ಮಾಡುತ್ತಾರೆ? ಇದರಲ್ಲಿ ಒಂದು ಪರಿವರ್ತನೆ ಆಗುತ್ತದೆ ಎನ್ನುವಂತಹದ್ದು ನಮ್ಮ ಮಾಧ್ಯಮಗಳ ಮೂಲಕ ಭಾರೀ ಪ್ರಚಾರವನ್ನು ಪಡೆದಿತ್ತು. ಕಳೆದ ಒಂದು ವರ್ಷದಲ್ಲಿ ನೀವು ಗುರಿ ಹಾಕಿಕೊಂಡಿದ್ದೀರಿ. ಒಂದು ಸುಧಾರಣೆಗಳನ್ನು ಮಾಡಿ ಆ ಒಂದು ಸಂಗ್ರಹವನ್ನು ಜಾಸ್ತಿ ಮಾಡುತ್ತೇವೆಂದು ಗುರಿ ಹಾಕಿಕೊಂಡಿದ್ದೀರಿ. ಅದರ ಪರಿಣಾಮ ಏನಾಗಿದೆ? ನೀವು ಹಾಕಿಕೊಂಡಿರತಕ್ಕ ಗುರಿ 7520.94 ಕೋಟಿ ರೂಪಾಯಿಗಳು. ಆದರೆ ಸಂಗ್ರಹ ಆಗಿರತಕ್ಕದ್ದು 5681.94 ಕೋಟಿ ರೂಪಾಯಿಗಳು. 1839 ಕೋಟಿ ರೂಪಾಯಿ ಕೊರತೆ ಸೇಲ್ಸ್ ಟ್ಯಾಕ್ಸ್‌ನಲ್ಲಿ. ಬಹುಶಃ ಈ ಮಾರ್ಚ್ ಎಂಡ್‌ವರೆಗೆ ಒಂದು ಇನ್ನೂರು ಮುನ್ನೂರು ಕೋಟಿ ರೂಪಾಯಿಗಳು ಆದರೆ ಸುಮಾರು 1500 ಕೋಟಿ ರೂಪಾಯಿಗಳ ಕೊರತೆ ಇವತ್ತು ಕಾಣುತ್ತಿದೆ. ಈ ಸಂಗ್ರಹದ ಕೊರತೆ ನಿಮ್ಮ ಸುಧಾರಣೆಯ ನಂತರವೂ ಕೂಡ ಎಲ್ಲಿ ಸೋರುತ್ತಿದೆ? ಎಲ್ಲಿ ಇದು ವೀಕ್ ಪಾಯಿಂಟ್ ಇದೆ? ಇದನ್ನು ಕಂಡು ಹಿಡಿಯಲಿಕ್ಕೆ ನಿಮಗೆ ಏಕೆ ಸಾಧ್ಯವಾಗಲಿಲ್ಲ ಎನ್ನುವಂತಹದು ನನಗೆ ಗೊತ್ತಾಗಲಿಲ್ಲ. ಇವತ್ತು ಅನೇಕ ಯೋಜನೆಗಳು ಇವೆ. ಅನೇಕ ಯೋಜನೆಗಳು ಹೆಸರಿಗೆ ಮಾತ್ರ ಇದೆ. ಇವು ಭಾಷಣದ ದಿವಸ ಹುಟ್ಟುತ್ತವೆ. ಚರ್ಚೆ ಆಗಿ ನಿಮ್ಮ ಉತ್ತರ ಬಂದ ದಿವಸ ಅವು ಸತ್ತು ಹೋಗುತ್ತವೆ. ಜನನ-ಮರಣದ ದಾಖಲಾತಿ ಇಲ್ಲೇ. ಒಂದೇ ಅಧಿವೇಶನದಲ್ಲಿ ಆಗುತ್ತದೆ. ಈಗ ಉದಾಹರಣೆಗೆ ನಮ್ಮ ಹೊಲ, ನಮ್ಮ ರಸ್ತೆ ಯೋಜನೆ. ಇದನ್ನು ನೀವು ಅನೌನ್ಸ್ ಮಾಡಿದಿರಿ. ಯಾವಾಗ ಮಾಡಿದಿರಿ? 2001-02ರಲ್ಲಿ ಅನೌನ್ಸ್ ಮಾಡಿದಿರಿ. ಅದರ ಗತಿ ಎಲ್ಲಿ ಹೋಯಿತು? ಒಂದು ಪೈಸೆ ಕೂಡ ಅದರಲ್ಲಿ ಖರ್ಚಾಗಿಲ್ಲ. ಆ ಯೋಜನೆ ಕಾರ್ಯಗತ ಆಗಲಿಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಬೇಕಾದಷ್ಟು ಆಗಿದೆ. ಸುಮಾರು 200 ಕಿಲೋ ಮೀಟರ್ ನಷ್ಟು ಆಗಿದೆ.

ಶ್ರೀ ಎನ್.ಜಿ. ನಂಜಯ್ಯನ ಮಠ್ : ಮಾನ್ಯ ಜ್ಞಾನೇಂದ್ರ ಅವರೇ, ಮಲಪ್ರಭಾ ಯೋಜನೆಯಲ್ಲಿ 452 ಕಿಲೋ ಮೀಟರ್ ಆಗಿದೆ.

(ಗೊಂದಲ)

ಶ್ರೀ ಎಸ್.ಜಿ. ನಂಜಯ್ಯನ ಮಠ್ : 450 ಕಿಲೋ ಮೀಟರ್ ನಮ್ಮ ಹೊಲ, ನಮ್ಮ ರಸ್ತೆ ಯೋಜನೆಯಲ್ಲಿ ಆಗಿದೆ. ಮಾನ್ಯ ಜ್ಞಾನೇಂದ್ರ ಅವರು ಬರುತ್ತೇವೆಂದರೆ ನಾವು ಕರೆದುಕೊಂಡು ಹೋಗುತ್ತೇವೆ.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್ : ಅತ್ಯಂತ ಉತ್ತಮವಾದಂತಹ ಕೆಲಸ ಆಗಿದೆ.

ಶ್ರೀ ಎಸ್.ಜಿ. ನಂಜಯ್ಯನ ಮಠ್ : ಹಣ ಇಲ್ಲವೇ ರಸ್ತೆ ಆಗುವುದಕ್ಕೆ ಸಾಧ್ಯವಾ? ಜ್ಞಾನೇಂದ್ರ ಅವರೇ, ನೀವು ಬರುತ್ತೇವೆಂದರೆ ನಾವು ಕರೆದುಕೊಂಡು ಹೋಗುತ್ತೇವೆ. 450 ಕಿಲೋ ಮೀಟರ್ ಒಂದೇ ಕಡೆ ತೋರಿಸುತ್ತೇವೆ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಯೋಜನೆ ಪ್ರಾರಂಭ ಆಗಿದೆ ಎಂದು ಅವರು ಹೇಳಿದರು. ತಾವು ಯೋಜನೆ ಪ್ರಾರಂಭವೇ ಆಗಿಲ್ಲ ಎಂದು ಹೇಳಿದಿರಿ, ಪ್ರಾರಂಭ ಆಗಿದೆ. ಎಲ್ಲಿ

40 ಪರ್ಸೆಂಟ್ ರೈತರು ಹಣ ಕೊಡಬೇಕಾಗಿತ್ತು, ಕೊಟ್ಟಿದ್ದಾರೆ, ಸರ್ಕಾರ 60 ಪರ್ಸೆಂಟ್ ಹಣ ಕೊಟ್ಟಿದ್ದಾರೆ. ರಸ್ತೆ ಆಗಿದೆ, ನೀವು ಕೊಟ್ಟಿಲ್ಲ, ಆದ್ದರಿಂದ ಆಗಿಲ್ಲ.

ಶ್ರೀ **ಆರಗ ಜ್ಞಾನೇಂದ್ರ** : ನಾನು ಹೇಳುವುದಾದರೆ ಬಹಳಷ್ಟು ಯೋಜನೆಗಳು ಆಗಿಲ್ಲ. ನಾನು ಅನೇಕ ಯೋಜನೆಗಳ ಬಗ್ಗೆ ಈಗ ಹೇಳಿದೆ. ಪ್ರಕಟಣೆ ಮಾಡುತ್ತೇವೆ, ನಮಗೆ ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದೆ. ಬಜೆಟ್‌ನಲ್ಲಿ ಅನೇಕ ಯೋಜನೆಗಳನ್ನೇನು ಪ್ರಕಟಣೆ ಮಾಡಿದ್ದೀರಿ; ಒಟ್ಟಾರೆ ಇದನ್ನು ನೋಡುವಾಗ 150 ಕೋಟಿ ರೂಪಾಯಿ ಸಾಕು. ಕೆಲವು ದೊಡ್ಡ ಯೋಜನೆಗಳಲ್ಲ. ಏನು ಹೊಸ ಹೊಸದಾಗಿ ಯೋಜನೆಗಳನ್ನೇನು ಪ್ರಕಟಣೆ ಮಾಡಿದ್ದೀರಿ, ಅದನ್ನು ಮುಗಿಸಲು 150 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೂ ಕೂಡ ಅನೇಕ ಸಾರಿ ನೀವು ಬಿಡುಗಡೆ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು 2001ರ ಬಜೆಟ್‌ನಲ್ಲಿ ಹೇಳಿದರು. ಬಹಳ ಒಳ್ಳೆಯ ಭಾಷಣ ಮಾಡಿದರು. ವಿತ್ತೀಯ ಕೊರತೆ, ಅದಕ್ಕೆ ಜೀರೋ ಪರ್ಸೆಂಟ್‌ಗೆ ತರುತ್ತೇವೆಂದು ಹೇಳಿದಿರಿ. ಅದು ಸಾಧ್ಯವಾಗಲಿಲ್ಲ ಏಕೆ ಎಂದು ಹೇಳಬೇಕು. ಇವತ್ತು ಜೀರೋ ಪರ್ಸೆಂಟ್ ಇರಲಿ ಇವರು ಅಧಿಕಾರಕ್ಕೆ ಬರುವಾಗ 1573 ಕೋಟಿ ರೂಪಾಯಿ ಇದ್ದದ್ದು ಸುಮಾರು 4000 ಹತ್ತಿರ ಹತ್ತಿರ ಕೋಟಿಗೆ ಹೋಗುತ್ತಿದೆ. ಜೀರೋ ಪರ್ಸೆಂಟಿಗೆ ತರಲಿಕ್ಕೆ ಏಕೆ ಸಾಧ್ಯವಾಗಲಿಲ್ಲ? ಒಟ್ಟಾರೆ ನನಗೆ ಅನಿಸುತ್ತದೆ. ನಿಮಗೆ ನಿಮ್ಮ ಬಜೆಟ್‌ನ ಮೇಲೆ ನಿಮ್ಮ ಆಲೋಚನೆಗಳ ಬಗ್ಗೆ ನೀವೇನು ಘೋಷಣೆ ಮಾಡುತ್ತಿದ್ದೀರಿ ಎನ್ನುವ ಬಗ್ಗೆ ನಿಮ್ಮ ಬದ್ಧತೆಗಳು ಇಲ್ಲ. ಘೋಷಣೆಗಳನ್ನು ಮಾಡುವುದು ಮಾತ್ರ ಹೊಣೆಗಾರಿಕೆ ಹೊರತು ನೀವು ಅನುಷ್ಠಾನಕ್ಕೆ ತರುವಂತಹ ಹೊಣೆಗಾರಿಕೆಗಳು ಇವತ್ತು ಇಲ್ಲ. ಇವತ್ತು ತೆರಿಗೆ ಸಂಗ್ರಹದ ಬಗ್ಗೆ ಅನೇಕ ವಿಚಾರಗಳು ಇದ್ದಾವೆ. ತೆರಿಗೆ ಸಂಗ್ರಹದ ಬಗ್ಗೆ ಹೇಳುತ್ತೇನೆ. ಇವತ್ತು ತೆರಿಗೆಯನ್ನು ಹಾಕಿದ್ದೀರಿ. ಯಾರ್ಯಾರ ಮೇಲೆ ಹಾಕಿದ್ದೀರಿ? ನಿಮಗೆ ಇವತ್ತು ಸಿಗುವಂತಹದು ನಮ್ಮ ಕೈ ನೋಡಿ ಭವಿಷ್ಯ ಹೇಳುವವರೂ ಕೂಡ ಸಿಕ್ಕಿ ಹಾಕಿಕೊಂಡಿದ್ದಾರೆ. ಜ್ಯೋತಿಷಿಗಳು ಸಿಕ್ಕಿದ್ದಾರೆ. ಅವರಿಗೂ ತೆರಿಗೆಯ ವ್ಯಾಪ್ತಿಗೆ ನೀವು ತರುತ್ತಿದ್ದೀರಿ. ಎಲ್ಲೋ ಜೀವನ ಮಾಡುತ್ತಿದ್ದಾರೆ. ನಿಮಗೇಕೆ ಅವರ ಮೇಲೆ ಸಿಟ್ಟು ಬಂತು ಎಂಬುದು ಗೊತ್ತಾಗಲಿಲ್ಲ. ಎಲ್ಲೋಒಂದು ಮರದ ಅಡಿಯಲ್ಲಿ ಕುಳಿತುಕೊಂಡು ಯಾರೋ ಪಾಪದವರಿಗೆ ಭವಿಷ್ಯ ಹೇಳುತ್ತಿರುತ್ತಾರೆ.

ಶ್ರೀ **ಬಿ.ಆರ್. ಯಾವಗಲ್**: ನಮ್ಮಂಥಹವರು ನಿಮ್ಮಂಥಹವರು ಹೋಗುವ ಫೈವ್ ಸ್ಟಾರ್, ಸೆವೆನ್ ಸ್ಟಾರ್ ಹೋಟೆಲ್‌ನಲ್ಲಿ ನೋಡುವಂತಹವರು.

ಶ್ರೀ **ಆರಗ ಜ್ಞಾನೇಂದ್ರ**: ಈಗ ಇಲ್ಲೊಬ್ಬರು ಇದ್ದಾರೆ. ನಿಮ್ಮ ತೆರಿಗೆ ಸಂಗ್ರಹದ ಆ ವ್ಯಾಪ್ತಿಗೆ ಯಾರ್ಯಾರನ್ನು ತರುತ್ತೀರಿ ಗೊತ್ತಿಲ್ಲ. ಇಲ್ಲಿ ಪಾರ್ಕ್‌ನಲ್ಲಿ ಒಬ್ಬರು ಇದ್ದಾರೆ. ಭೂತಕನ್ನಡಿ ಹಾಕಿ ಹಸ್ತ ಸಾಮುದ್ರಿಕೆ ನೋಡಿ ಭವಿಷ್ಯ ಹೇಳುತ್ತಿದ್ದಾರೆ. ಹೇಗೆ ಆಗಿದೆ ಎಂದರೆ ನಮ್ಮ ಅನೇಕ ಸ್ನೇಹಿತರು ಜಿಗುಪ್ಸೆ ಬಂದು ಆತ್ಮಹತ್ಯೆಗೆ ಹೋಗುತ್ತಾರೆ. ಆತ್ಮಹತ್ಯೆಗೆ ಹೋಗುವವರನ್ನು ತಪ್ಪಿಸುವವರು ಇವರು. ಏಕೆಂದರೆ ನಿಮ್ಮ ಆರ್ಥಿಕ ಪರಿಸ್ಥಿತಿಗಳು, ನಿಮ್ಮ ಬೆಳೆ, ನೀವು ಕೊಟ್ಟಂತಹ ಬೆಂಬಲ ಬೆಲೆದಿಂದಾಗಿ ಯಾರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ, ಅವರಿಗೆ ಒಂದು ಧೈರ್ಯಹೇಳಿ ಬಿಡುತ್ತಾರೆ. ಸುಳ್ಳೋ ಪಳ್ಳೋ ನಮಗೆ ಗೊತ್ತಿಲ್ಲ. ಒಟ್ಟಿನಲ್ಲಿ ಒಂದು ಧೈರ್ಯ ಹೇಳುತ್ತಾರೆ. ನೀನು ಬದುಕುತ್ತೀಯಾ, ನಿನ್ನ ಭವಿಷ್ಯದಲ್ಲಿ ಭಾರೀ ಕೋಟ್ಯಾಧೀಶ ಆಗುವಂತಹ ಒಂದು ಲಕ್ಷಣಗಳು ಇದ್ದಾವೆ ಎಂದು ಹೇಳುತ್ತಾರೆ. ಇಲ್ಲೊಬ್ಬರು ಗಂಟು ಹೊತ್ತುಕೊಂಡು

ತಿರುಗಾಡುತ್ತಿದ್ದರು. ಅವ ಹೇಳುತ್ತಿರುತ್ತಾನೆ ನಾನು ಮುಖ್ಯಮಂತ್ರಿ ಆಗುತ್ತೇನೆಂದು. ಗಂಟು ಹೊತ್ತುಕೊಂಡು ಇಲ್ಲಿ ಎಲ್ ಎಚ್‌ನಲ್ಲಿ ಎಲ್ಲೋ ತಿರುಗುತ್ತಿರುತ್ತಾನೆ. ಅವ ಮುಖ್ಯಮಂತ್ರಿ ಮಾತನಾಡಿದ ಹಾಗೆ ಮಾತನಾಡುತ್ತಿರುತ್ತಾನೆ. ಅವನು ಗತ್ತು, ಗಾಂಭೀರ್ಯದಿಂದ ಓಡಾಡುತ್ತಿರುತ್ತಾನೆ. ಅವ ದಿವಸ ಹೋಗಿ ಭವಿಷ್ಯ ಹೇಳುವವರ ಹತ್ತಿರ ಕೈ ಕೊಡುತ್ತಿರುತ್ತಾನೆ. ಏಕೆಂದರೆ ಅವನಿಗೂ ಒಂದು ಧೈರ್ಯ ಕೊಟ್ಟಿರುತ್ತಾರೆ. ಅವನು ಖುಷಿಯಾಗಿ ನಾಲ್ಕು ದಿವಸ ಬದುಕುವಂತಹ ಒಂದು ವ್ಯವಸ್ಥೆಯನ್ನು ಅವನು ಮಾಡಿರುತ್ತಾನೆ. ಅವ ಏಕೆ ನಿಮ್ಮ ಕೆಂಗಣ್ಣಿಗೆ ಗುರಿಯಾದ ಎಂಬುದು ನನಗೆ ಅರ್ಥ ಆಗಲಿಲ್ಲ. ಈ ರೀತಿ ಅನೇಕ ಜನರನ್ನು ನೀವು ತೆರಿಗೆಯ ವ್ಯಾಪ್ತಿಗೆ ಒಳಪಡಿಸಿದ್ದೀರಿ. ಜ್ಯೋತಿಷ್ಯ ಶಾಸ್ತ್ರ ತಪ್ಪು ಎಂದು ನಾನು ಹೇಳುವುದಿಲ್ಲ. ಅವರು ಎಲ್ಲೋ ಆರು ಕಾಸು ಮೂಸು ದುಡಿದುಕೊಳ್ಳುತ್ತಿರುತ್ತಾರೆ. ಅವರನ್ನೂ ಕೂಡ ನೀವು ತೆರಿಗೆಯ ವ್ಯಾಪ್ತಿಗೆ ತಂದು ನೀನು ಪ್ರೊಫೆಷನಲ್ ಟ್ಯಾಕ್ಸ್ ಕಟ್ಟಬೇಕು ಎಂದು ಹೇಳುತ್ತಿದ್ದೀರಿ. ಆಮೇಲೆ ಟ್ಯಾಕ್ಸಿ ಮೇಲೆ ತೆರಿಗೆ ಎಲ್ಲೋ ಟ್ಯಾಕ್ಸಿ ಮಾಡಿ ಜೀವನ ಮಾಡುತ್ತಿರುವವರನ್ನೂ ಕೂಡ ನೀವು ಪ್ರೊಫೆಷನಲ್ ಟ್ಯಾಕ್ಸ್ ವ್ಯಾಪ್ತಿಗೆ ತರುತ್ತಿದ್ದೀರಿ. ಯೋಗಾಸನ ಹೇಳಿ ಕೊಡುವವರು, ರೇಕಿ ಡ್ರೈನಿಂಗ್ ನಡೆಸುವಂತಹವರು. ಎಲ್ಲೋ ಆರೋಗ್ಯದ ಬಗ್ಗೆ ಸುಧಾರಣೆ ಮಾಡುತ್ತಿದ್ದರು. ನಿಮ್ಮ ಸರ್ಕಾರದ ಯಾವುದೇ ಅನುದಾನ ಅವರು ಕೇಳಲಿಲ್ಲ ಅಥವಾ ತಿಂಗಳು ಸಂಬಳ ಕೇಳಲಿಲ್ಲ. ಇವತ್ತು ಎಲ್ಲೋ ಯೋಗಾಸನ ಹೇಳಿ ಕೊಡುವವರನ್ನು, ರೇಕಿ ಟ್ರೈನಿಂಗ್ ಕೊಡತಕ್ಕವರನ್ನೂ ಕೂಡ ನೀವು ಇವತ್ತು ಟ್ಯಾಕ್ಸಿನ ವ್ಯಾಪ್ತಿಗೆ ಸೇರಿಸುತ್ತಿದ್ದೀರಿ. ಇದನ್ನು ದಯವಿಟ್ಟು ಸುಧಾರಣೆ ಮಾಡಬೇಕೆಂದು ಹೇಳುತ್ತೇನೆ. ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ವಿಶೇಷವಾಗಿ ನಾನು ಪ್ರಸ್ತಾಪ ಮಾಡುವುದು ಇದೆ. ಟ್ಯಾಕ್ಸಿ ಇಟ್ಟುಕೊಂಡವರನ್ನು ಮತ್ತು ಪಾಮಿಷ್ಟ್‌ಗಳು ಹಾಗೂ ಯೋಗಾಸನ ಮತ್ತು ರೇಕಿ ಟ್ರೈನಿಂಗ್ ನಡೆಸತಕ್ಕವರು, ಅವರ ಮೇಲೆ ಪ್ರೊಫೆಷನಲ್ ಟ್ಯಾಕ್ಸ್ ಹಾಕುವಂತಹುದು. ಅವರನ್ನು ನೀವು ಪ್ರೊಫೆಷನಲ್ ಟ್ಯಾಕ್ಸ್ ವ್ಯಾಪ್ತಿ ಒಳಗಡೆ ತರುತ್ತಿದ್ದೀರಿ. ಇದು ಯಾರು ನಿಮಗೆ ಹೇಳಿದರು? ಏತಕ್ಕಾಗಿ ತಂದಿರಿ? ಅದೇನು ದೊಡ್ಡ ಪ್ರೊಫೆಷನ್ ಎಂದು ಹೇಳಿ ತಂದಿದ್ದೀರಿ ಗೊತ್ತಿಲ್ಲ. ಆಮೇಲೆ ಯೋಗದ ವಿಚಾರ. ಇವತ್ತು ನಿಮ್ಮ ಆಸ್ಪತ್ರೆಗಳಿಗೆ ಜನ ಏನಾದರೂ ಕಡಿಮೆ ಆಗಿದ್ದರೆ ಯೋಗಾಸನ ತರಬೇತಿಗಳಿಂದಾಗಿ ಕಡಿಮೆ ಆಗಿರುವುದು. ನಮ್ಮ ಪರಂಪರಾಗತವಾಗಿ ಬಂದಿರತಕ್ಕ ಯೋಗ ತರಗತಿಯನ್ನು ಇವತ್ತು ನಡೆಸುವುದರಿಂದಾಗಿ ನಿಮ್ಮ ಆಸ್ಪತ್ರೆಗೆ ಜನ ಹೋಗುವುದಿಲ್ಲ. ಅಥವಾ ಅನೇಕ ಖಾಯಿಲೆಗಳಿಗೆ ಯೋಗ ಒಂದು ದೊಡ್ಡ ಮದ್ದು. ಇವತ್ತು ನಮ್ಮ ವಿದೇಶಿಯರೂ ಕೂಡ ಬಂದು ಯೋಗಾಸನದ ಅಭ್ಯಾಸವನ್ನು ಮಾಡಿಕೊಳ್ಳತಕ್ಕ ಈ ಸಂದರ್ಭದಲ್ಲಿ ನೀವು ಯೋಗಾಸನದ ತರಗತಿಗೆ ಪ್ರೋತ್ಸಾಹ ಕೊಡಬೇಕಾಗಿತ್ತು. ಅವರಿಗೆ ನೀವು ಒಂದಿಷ್ಟು ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಆ ಜನರನ್ನು ಈ ಪ್ರೊಫೆಷನಲ್ ಟ್ಯಾಕ್ಸ್ ವ್ಯಾಪ್ತಿಗೆ ತರತಕ್ಕಂಥಹ ಪ್ರಸ್ತಾಪವನ್ನು ಮಾಡುತ್ತೀರಿ ಎಂದಾದರೆ ಬಹುಶಃ ಇದು ಯಾರೋ ಅಧಿಕಾರಿಗಳು ಮಾಡಿರತಕ್ಕ ಒಂದು ಪ್ರಸ್ತಾವಕ್ಕೆ ನೀವು ಧ್ವನಿಗೂಡಿಸಿದ್ದೀರಿ ಅಥವಾ ಸೈನ್ ಹಾಕಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಯಾರೋ ಅಧಿಕಾರಿಗಳು ಇವನ್ನೆಲ್ಲಾ ತರಬಹುದು ಎಂದು ಹೇಳಿದ್ದಾರೆ. ಎಷ್ಟು ಮಹಾ ಆದಾಯ ಇದರಿಂದಾಗಿ ಬರುತ್ತದೆ? ಯಾರೋ ಇಂತಹದನ್ನು ನಡೆಸುವವರಿಗೆ ಪ್ರೋತ್ಸಾಹ ಕೊಡುವ ಬದಲು ಅವರನ್ನು ಜಿಗುಪ್ಸೆಗೆ ಒಳ ಮಾಡುತ್ತಿದ್ದೀರಿ. ಅಥವಾ ಇನ್ನೆಲ್ಲೋ ಒಂದು ಕಡೆ ಯೋಗಾಸನ

ತರಗತಿ ನಡೆಸುವಂತಹವರು ಎಲ್ಲಾದರೂ ಟ್ಯಾಕ್ಸ್‌ನವರು ಬರುತ್ತಾರೇನೋ ಎಂದು ಭಯದಿಂದ ನೋಡಬಹುದು. ಒಂದು ತರಹ ಭಯದ ವಾತಾವರಣ. ಒಂದು ರೀತಿಯ ಅಪರಾಧಿ ಪ್ರಜ್ಞೆಯನ್ನು ಆ ಜನಗಳಲ್ಲಿ ಕೂಡ ನಿರ್ಮಾಣ ಮಾಡತಕ್ಕಂಥಹ ಕೆಲಸ. ಬೆಳಗಿನ ಹೊತ್ತು ನಮ್ಮಲ್ಲಿಲ್ಲಾ ಇದ್ದಾರೆ ವಾಲಂಟರಿಯಾಗಿ ಕೆಲವರು ನಾವು ಯೋಗ ಹೇಳಿಕೊಡುತ್ತೇವೆ ಬನ್ನಿ ಎನ್ನುತ್ತಾರೆ. ಅವರಿಗೇನೂ ಮೂರು ಕಾಸಿನ ಲಾಭವಿಲ್ಲ. ಅವರು ಸಮಯ ಕೊಡುತ್ತಾರೆ. ಅನೇಕ ಬ್ಯಾಂಕ್ ಎಂಪ್ಲಾಯೀಸ್ ಇದ್ದಾರೆ ಅಥವಾ ಬೇರೆ ಬೇರೆ ಪ್ರೊಫೆಷನ್ ಮಾಡುವಂತಹವರು ಇವತ್ತು ಇದ್ದಾರೆ. ಆಧುನಿಕ ಪ್ರಪಂಚದಲ್ಲಿ ಇವತ್ತು ಯೋಗಾಸನ ಅತ್ಯಂತ ಅಗತ್ಯ ಇದೆ. ದೈಹಿಕವಾಗಿ, ಮಾನಸಿಕವಾಗಿ ನಾವು ಸದೃಢ ಆಗಲಿಕ್ಕೆ ಯೋಗ ಇದೆ. ಸಾವಿರಾರು ಜನ ಇದನ್ನು ಕಲಿಯುತ್ತಿದ್ದಾರೆ. ಯಾರೂ ಕೂಡ ಫೀಜ್ ಕೊಡುವುದಿಲ್ಲ. ಅವನ್ನು ಇವತ್ತು ನೀವು ಪ್ರೊಫೆಷನಲ್ ಟ್ಯಾಕ್ಸ್‌ನ ವ್ಯಾಪ್ತಿಗೆ ತಂದರೆ ಹೇಗೆ ಆಗುತ್ತದೆ? ದಯವಿಟ್ಟು ತಾವು ಇದನ್ನು ರದ್ದು ಮಾಡಬೇಕು. ತಾವು ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ವಿಶೇಷವಾಗಿ, ಈ ಸಲ ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ. ಸಣ್ಣ ಉಳಿತಾಯ ಸಂಗ್ರಹದಲ್ಲಿ ನಿಮಗೆ ಬಹುಶಃ ಶೇಕಡ 60 ರಷ್ಟು ಇರುತ್ತಿತ್ತು. ಕೇಂದ್ರಕ್ಕೆ ಶೇಕಡ 40ರಷ್ಟು ಹೋಗುತ್ತಿತ್ತು. ಆದರೆ, ಕೇಂದ್ರ ಸರ್ಕಾರ ಇವೊತ್ತು ಶೇಕಡ ನೂರರಷ್ಟನ್ನು ರಾಜ್ಯಕ್ಕೆ ಬಿಟ್ಟುಕೊಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಣ್ಣ ಉಳಿತಾಯ ಸಂಗ್ರಹದ ಗುರಿಯನ್ನು ಜಾಸ್ತಿ ಇಟ್ಟುಕೊಳ್ಳಬೇಕಾಗಿದೆ. ನಾವು ಈ ರಾಜ್ಯದಲ್ಲಿ ಸಣ್ಣ ಉಳಿತಾಯಕ್ಕೆ ಉತ್ತೇಜನ ನೀಡುವ ಮೂಲಕ ಸಂಗ್ರಹದಿಂದ ಬಂದ ಹಣವನ್ನು ರಾಜ್ಯದ ಅಭಿವೃದ್ಧಿ ಕೆಲಸ-ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳಾದ ತಾವು ಹಣಕಾಸು ಸಚಿವರಾಗಿದ್ದೀರಿ. ನಿಮ್ಮ ಹತ್ತಿರ ಯಾರು ಬಂದಿದ್ದರೋ ಗೊತ್ತಿಲ್ಲ. ನನಗೆ ಅನೇಕ ಮಿತ್ರರಿದ್ದಾರೆ. ಇವೊತ್ತು ಅವರು ಹಳ್ಳಿ-ಹಳ್ಳಿಯಲ್ಲಿ ಸಣ್ಣ ಉಳಿತಾಯವನ್ನು ಸಂಗ್ರಹ ಮಾಡುತ್ತಿದ್ದಾರೆ. ಅವರು ಬಂದರೆ ಅವರಿಗೆ ಇನ್‌ಸೆಂಟಿವ್ ಕೊಡಬೇಕು. ಕಳೆದ ಮೂರ್ನಾಲ್ಕು ವರ್ಷಗಳಿಂದ ಇನ್‌ಸೆಂಟಿವ್ ಕೊಟ್ಟಿರುವುದಿಲ್ಲ ಸಣ್ಣ ಉಳಿತಾಯದಲ್ಲಿ ತೊಡಗಿಸಿರುವ ಹಣಕ್ಕೆ ಇನ್‌ಸೆಂಟಿವ್ ಕೊಡಬೇಕು. ಸುಮಾರು 30-35 ಕೋಟಿ ರೂಪಾಯಿಗಳಷ್ಟು ಇನ್‌ಸೆಂಟಿವ್ ಕೊಡುವುದು ಬಾಕಿ ಇರುವುದಾಗಿ ಮೊನ್ನೆ ನನಗೆ ಒಂದು ಉತ್ತರ ಬಂದಿದೆ. ಇನ್‌ಸೆಂಟಿವ್ ಕೊಡದಿದ್ದರೆ ಸಣ್ಣ ಉಳಿತಾಯದಲ್ಲಿ ಹಣ ಸಂಗ್ರಹಿಸಲು ಅವರಿಗೆ ಪ್ರೋತ್ಸಾಹವಾದರೂ ಎಲ್ಲಿ ಸಿಗುತ್ತದೆ ಹಾಗೂ ಆ ಕೆಲಸ ಮಾಡುವವರಿಗೆ ಆದ್ಯತೆ ನೀಡಲು ಹೇಗೆ ಸಾಧ್ಯವಾಗುತ್ತದೆ? ಇನ್‌ಸೆಂಟಿವ್ ಅನ್ನು ತಾವು ಆಗಿಂದಾಗ್ಗೆ ಬಿಡುಗಡೆ ಮಾಡಬೇಕು. ನಿಮ್ಮ ದೃಷ್ಟಿಯಲ್ಲಿ ಅದು ಅನುತ್ಪಾದಕ ವೆಚ್ಚವೇ? ಹಣಕಾಸು ಇಲಾಖೆಯವರು ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಾನು ಡೈರೆಕ್ಟರ್ ಅವರನ್ನು ಮೊನ್ನೆ ಮಾತನಾಡಿಸಿದಾಗ, 'ಸಾರ್, ನಾವು ಕೊಡಬೇಕು, ಹೌದು. ಆದರೆ, ನಾನೇನು ಮಾಡಲಿ? ಸರ್ಕಾರಕ್ಕೋಸ್ಕರ ನಾವು ಒಳ್ಳೆಯ ಕೆಲಸ ಮಾಡುತ್ತಿದ್ದೇವೆ. ಸರ್ಕಾರ ನಮ್ಮ ಕಡೆ ನೋಡದಿದ್ದರೆ ನಾವೇನು ಮಾಡುವುದು?' ಎಂದು ಅವರು ಹೇಳುತ್ತಾರೆ. ಹಣಕಾಸು ಇಲಾಖೆಯವರು ಇನ್‌ಸೆಂಟಿವ್ ಅನ್ನೂ ತಡೆಹಿಡಿದರೆ, ಹಾಗಾದರೆ ಸಣ್ಣ ಉಳಿತಾಯ ಸಂಗ್ರಹದ ಅಗತ್ಯವಿಲ್ಲವೆಂದು ಅವರು ಭಾವಿಸುತ್ತಾರೆಯೇ? ನಿಜವಾಗಿಯೂ ಮೂಲ ಬಂಡವಾಳ ಕೊಡುವ ಕೆಲಸ ಸಣ್ಣ ಉಳಿತಾಯ ಸಂಗ್ರಹದಿಂದ ಆಗುತ್ತಿರುವುದರಿಂದ ನಾವು ಇದನ್ನು ಇವೊತ್ತು ನಗಣ್ಯ ಮಾಡಿದ್ದೇವೆ.

ಇಂತಹ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ. ಇನ್ನೂ ನಮ್ಮ ಅನೇಕ ನಾಯಕರು ಮಾತನಾಡುವವರಿದ್ದಾರೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಇವೊತ್ತು ಅತ್ಯಂತ ಅವೈಜ್ಞಾನಿಕ ರೀತಿಯಲ್ಲಿ ತಯಾರಿಸಿರುವ ಬಜೆಟ್ ಇದಾಗಿದೆ. ಜನಪರವಾಗಿಲ್ಲದೇ ಇರತಕ್ಕಂಥ ಬಜೆಟ್ ಹಾಗೂ ಜನರನ್ನು ಭ್ರಮೆಗೊಳಪಡಿಸತಕ್ಕಂಥ ಬಜೆಟ್ ಇದಾಗಿದೆಯೇ ವಿನಾ ಜನರಿಗಾಗಿ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಹಮ್ಮಿಕೊಳ್ಳುವ ಬಜೆಟ್ ಇದಲ್ಲವೆಂದು ನನ್ನ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ, ಇಷ್ಟು ಹೊತ್ತು ಮತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ ಭುಧವಾರ 26ನೇ ಮಾರ್ಚ್ 2003 ಬೆಳಿಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

9. ಅನುಬಂಧ I

ದಿನಾಂಕ 25.3.2003ರ ಚುಕ್ಕೆಗುರುತಿಲ್ಲದ ಪ್ರಶ್ನೋತ್ತರ

ಸುಳ್ಯ ತಾಲ್ಲೂಕಿನಲ್ಲಿ ಬರುವ ಅರಕ್ಷಕ ಠಾಣಾ ನೌಕರರ ವಸತಿ ಗೃಹ ದುರಸ್ತಿ

1841(2094) ಶ್ರೀ ಅಂಗಾರ ಎಸ್ (ಸೂಳ್ಯ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅರಕ್ಷಕ ಠಾಣಾ ಇಲಾಖೆ ನೌಕರರ ವಸತಿ ಗೃಹ ತುಂಬಾ ಹಳೆಯದಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ. ಸದರಿ ವಸತಿ ಗೃಹವನ್ನು ದುರಸ್ಥಿಗೊಳಿಸುವಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು)

ಅ. ಹೌದು

ಆ. 1996-97ನೇ ಸಾಲಿನಲ್ಲಿ ರೂ. 80,000.00 (ಎಂಬತ್ತು ಸಾವಿರ) ವೆಚ್ಚದಲ್ಲಿ ಸದರಿ ವಸತಿ ಗೃಹಗಳನ್ನು ದುರಸ್ಥಿಗೊಳಿಸಲಾಗಿರುತ್ತದೆ. ಸದ್ಯಕ್ಕೆ ಸದರಿ ವಸತಿ ಗೃಹಗಳ ದುರಸ್ಥಿಯ ಅಗತ್ಯತೆ ಕಂಡು ಬಂದಿರುವುದಿಲ್ಲ.

ಸೂಳ್ಯ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಬಸ್ಸುಗಳ ವ್ಯವಸ್ಥೆ

1842(2095) ಶ್ರೀ ಅಂಗಾರ ಎಸ್ (ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸುಳ್ಯ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ಬಸ್ಸುಗಳನ್ನು ಒದಗಿಸಲು ಸಾರ್ವಜನಿಕರ ಬೇಡಿಕೆ ಇರುವುದು ಸರ್ಕಾದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದರೆ, ಎಷ್ಟು ಬೇಡಿಕೆಗಳು ಬಂದಿವೆ; ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?